# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ ದಿನಾಂಕ : DATE : 15/04/2019

# ಶಾಸಕರ ಭವನದಿಂದ ಬಿದ್ದು ಸರ್ಕಾರಿ ನೌಕರ ಸಾವು

ಕ.ಪ್ರ 15/4/19

ಬೆಂಗಳೂರು: ಶಾಸಕರ ಭವನದ ಐದನೇ ಮಹಡಿ ಮೇಲಿಂದ ಕೆಎಸ್ಆರ್‌ಟಿಸಿ ಬಸ್ ನಿರ್ವಾಹಕ ಬಿದ್ದು, ಸಂಶಯಾಸ್ಪದವಾಗಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ಮಾವಳ್ಳಿಯ ನಿವಾಸಿ ಶಿವಶಂಕರ್(55) ಮೃತರು. ತನಿಖೆ ನಡೆಸಲಾಗುತ್ತಿದೆ ಎಂದು ವಿಧಾನಸೌಧ ಪೊಲೀಸರು ಹೇಳಿದರು. ಶಿವಶಂಕರ್ ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಓರ್ವ ಪುತ್ರ ಇದ್ದಾನೆ. ಕುಟುಂಬ ಮಾವಳ್ಳಿಯಲ್ಲಿ ನೆಲೆಸಿದೆ. ಶಿವಶಂಕರ್ ಅವರು ಕಳೆದ 18 ವರ್ಷಗಳಿಂದ ಕೆಎಸ್ಆರ್‌ಟಿಸಿಯಲ್ಲಿ ನಿರ್ವಾಹಕರಾಗಿದ್ದರು. ಶಾಸಕರ ಭವನದಲ್ಲಿರುವ ಕೆಎಸ್ಆರ್‌ಟಿಸಿ ಬುಕ್ಕಿಂಗ್ ಕೌಂಟರ್‌ನಲ್ಲಿ ಟಿಕೆಟ್ ನೋಂದಣಿ ಮಾಡುವ ಕೆಲಸ ಮಾಡುತ್ತಿದ್ದರು. ಶಿವಶಂಕರ್ ಭಾನುವಾರ ಮಧ್ಯಾಹ್ನ 2.25ರಲ್ಲಿ ಊಟ ಮುಗಿಸಿ ಲಿಫ್ಟ್‌ನಲ್ಲಿ 5ನೇ ಮಹಡಿಗೆ ಹೋಗಿ ಅಲ್ಲಿಂದ ಕೆಳಗೆ ಬಿದ್ದಿದ್ದು, ಸ್ಥಳದಲ್ಲೇ ಅಸುನೀಗಿದ್ದಾರೆ.